
ಅಕ್ಟೋಬರ್ -2007

ಬೆಲೆ-6.00

ಕಲ್ಯಾಣ ಕಿರಣ



ನವದೆಹಲಿಯ ಬಸವ ಮಂಟಪದ ಕಟ್ಟಡ



ಶರಣ ಹರಳಯ್ಯ, ಕಲ್ಯಾಣಮ್ಮನವರಿಂದ ಗುರು ಬಸವಣ್ಣನವರಿಗೆ ಚಮ್ಮಾವುಗೆ ಸಮರ್ಪಣೆ.

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-37 | ಬಸವ ಶಕೆ-874 | ಆಜೀವ ಸದಸ್ಯತ್ವ 600 ರೂ.

ಸಂಚಿಕೆ-4 | ಅಕ್ಟೋಬರ್-2007 | ವಾರ್ಷಿಕ ಚಂದಾ 60/- ರೂ.

ಚನ್ನಬಸವ ಜಯಂತಿ ದಿ.8-11-2007
ಶುಭಾಶಯಗಳೊಡನೆ

1. ಬಿತ್ತದೆ ಬೆಳೆಯದೆ ಬಂದ ಹೆಬ್ಬೆಳಸಿನ ರಾಶಿಯ ನೋಡಾ !
ಸುಗಂಧ ಬಂಧ ಬಂಧುರದಂತೆ ಹುಟ್ಟುತ್ತವೆ ಪರಿಮಳ!
ಆದಿ ಅನಾದಿಯಿಲ್ಲದ ಮುನ್ನವೆ ತನ್ನಿಂದವೆ ತಾನಾಗಿರ್ದ ಕಾರಣ,
ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು, ಲಿಂಗಸ್ವಯವಾಗಿ
ಎನಗೆ ಗತಿಪಥವ ತೋರಿಸಬೇಕೆಂದು ಆಗಾದನು
ಕೂಡಲ ಸಂಗಮದೇವರಲ್ಲಿ ಚನ್ನಬಸವಣ್ಣನು!

- ವಿಶ್ವಗುರು ಬಸವಣ್ಣನವರು

2. ನರಲೋಕದ ನರರುಗಳೆಲ್ಲ ನರಸಂಸಾರಕ್ಕೊಳಗಾದರು.
ಸುರ ಲೋಕದ ಮುನಿಗಳೆಲ್ಲರು ತಪೋಸಂಸಾರಕ್ಕೊಳಗಾದರು.
ಜಂಗಮವ ಪೂಜಿಸುವವರೆಲ್ಲರು ಸಾಯುಜ್ಯ ಸಂಸಾರಕ್ಕೊಳಗಾದರು.
ರುದ್ರಲೋಕದ ರುದ್ರಗಣಂಗಳೆಲ್ಲರು ರುದ್ರಪದವೆಂಬ
ಸಂಸಾರಕ್ಕೊಳಗಾದರು
ಪ್ರಸಾದ ಪಾದೋದಕ ಸಂಬಂಧಿಗಳೆಲ್ಲರು ಪ್ರಸಾದ ಸಂಸಾರಕ್ಕೊಳಗಾದರು.
ಗುಹೇಶ್ವರ ಲಿಂಗದಲ್ಲಿ ಸರ್ವಸಂಸಾರವಿರಹಿತ
ಚನ್ನ ಬಸವಣ್ಣಂಗೆ ನಮೋ ನಮೋ ಎಂಬೆನು.

- ಶೂನ್ಯ ಪೀಠಾಧೀಶ ಅಲ್ಲಮ ಪ್ರಭು ದೇವರು

3. ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯ ಶಿವನು.
ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ.
ಚಿತ್ತದ ಪ್ರವೃತ್ತಿಯ ಹಿಂಗಿಸಿ, ಮುಕ್ತಿ ಪಥವ ತೋರಿದನಲ್ಲಾ ಅಸಂಖ್ಯಾತರುಗಳಿಗೆ!
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ, ಭಾವವೆಲ್ಲ ಮಹಾ ಘನದ ಬೆಳಗು.
ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣ ಸಮ್ಯಗ್ ಜ್ಞಾನಿ ಚನ್ನಬಸವಣ್ಣನ ಶ್ರೀ ಪಾದಕ್ಕೆ
ಶರಣೆಂದು ಎನ್ನ ಭವಂ ನಾಸ್ತಿಯಾಯಿತ್ತಯ್ಯ ಪ್ರಭುವೇ.

- ಜಗನ್ಮಾತಾ ಅಕ್ಕಮಹಾದೇವಿ

4. ಆಚಾರವೆ ಕಾಯ, ಆಚಾರವೆ ಪ್ರಾಣ, ಆಚಾರವೆ ಲಿಂಗ, ಆಚಾರವೆ ಸಂಗ
ಇಂತಪ್ಪ ಆಚಾರ ಸನ್ನಿಹಿತನಯ್ಯ ನಮ್ಮ ಚನ್ನಬಸವಣ್ಣನು,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತ ಚನ್ನಮಲ್ಲಿಕಾರ್ಜುನ
ನಿಮ್ಮ ಚನ್ನಬಸವಣ್ಣನು ಸರ್ವಾಚಾರ ಸಂಪನ್ನನು.
ಇಂತಪ್ಪ ಚನ್ನಬಸವಣ್ಣನ ನಿಲವ ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ?
ನಿಮ್ಮ ಧರ್ಮ, ನಿಮ್ಮ ಧರ್ಮ !

- ಮರುಳು ಶಂಕರದೇವ

ಕಿರಣಗನ್ನಡಿ

ವಿಶೇಷ ಸೂಚನೆ

ದೆಹಲಿ ಸಮ್ಮೇಳನಕ್ಕೆ ಹೊರಡುವವರಿಗೆ ಸೂಚನೆ ನೀಡಲು ಕಲ್ಯಾಣ ಕಿರಣವನ್ನು ಬೇಗನೆ ಕಳಿಸಬೇಕಾದ್ದರಿಂದ ಪುಟ ಸಂಖ್ಯೆ ಕಡಿಮೆ ಮಾಡಿ, ಮುದ್ರಿಸಿ ಕಳಿಸಲಾಗಿದೆ.

ನವಂಬರ್ ತಿಂಗಳಿನಲ್ಲಿ ಬರುವ ಹಬ್ಬ ಚನ್ನಬಸವಣ್ಣನವರ ಜಯಂತಿ, ದೀಪಾವಳಿ ಪಾಡ್ಯ ನವೆಂಬರ್ 8, 2007ರಂದು. ಅಂದು ಚನ್ನಬಸವಣ್ಣನವರ ಜಯಂತಿ ವಚನ ದೀಪೋತ್ಸವ ಆಚರಿಸಬೇಕು.

★----★----★----★----★----★

ಬೆಳಗುವೆ ಬೆಳಗುವೆ ಮಂಗಳದಾರತಿ
ಜಂಗಮ ಜ್ಯೋತಿ ಚನ್ನಬಸವೇಶಗೆ ॥

ಗುರು ಬಸವ ತಂದೆಯ ಕರಕಮಲ ಜನಿತನೆ ಶರಣರ ಹೃದಯದ ಶ್ರೀ ಪರಮ ಹಂಸೆಯೆ
ಅಕ್ಕನಾಗಲಾಂಬಿಕೆಯ ಮಮತೆಯ ಕಂದನೆ ಅಯ್ಯ ಶಿವದೇವನ ಪ್ರೇಮದ ಪುತ್ರನೆ ॥

ಕಲ್ಯಾಣ ಪುರದೊಳು ಜನನವ ಹೊಂದಿ ಉಳಿವೆಯ ಕ್ಷೇತ್ರದಿ ಲಿಂಗದೇವನ ಬೆರೆದು
ಎಳೆವರೆಯದಲ್ಲೇ ಆತ್ಮಜ್ಞಾನಿಯಾಗಿ ವಿರತಿಯ ಪಥದೊಳು ಮುನ್ನಡೆದ ಮಹಿಮನೆ

ಧರ್ಮಪಿತ ಬಸವರು ಕೊಟ್ಟಿಹ ಧರ್ಮವ ತತ್ವದ ನೆಲೆಯಲಿ ಸ್ಫುಟವಾಗಿ ನೀಡಿ
ಷಟಸ್ಥಲ ಚೌಕಟ್ಟಿಗೆ ವಚನಗಳನ್ನಿರಿಸಿ ಅರಿವಿನ ನಿಧಿಯಾಗಿ ಮೆರೆದ ಸುಜ್ಞಾನ

ಶರಣ ಧರ್ಮಕ್ಕೆ ಸಂಕಷ್ಟ ಬರಲು ಕಾಷಾಯ ಧರಿಸಿಯು ಖಡ್ಗವ ಹಿಡಿದೆ
ವಚನ ವಾಙ್ಮಯವ ರಕ್ಷಿಸಿದ ವಿರಾಗಿ ಸಚ್ಚಿದಾನಂದ ಕಿರಣ ಚನ್ನಬಸವ ಯೋಗಿ

- ಮಾತಾಜಿ

KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10, Printed By Padmashree Printers, B'lore

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010



ಭಾರತದ ರಾಜಧಾನಿ ನವ ದೆಹಲಿಯಲ್ಲಿ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನ 2007, ಅಕ್ಟೋಬರ್ 27, 28 ಮತ್ತು 29ರಂದು ಎಂ.ಸಿ.ಡಿ. ಕಮ್ಯುನಿಟಿ ಹಾಲ್, ದಾಬಡಿ ಮುಂಭಾಗದ ಮೈದಾನದಲ್ಲಿ

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ಆಶ್ರಯದಲ್ಲಿ 2007ನೇ ಇಸವಿಯ ಅಕ್ಟೋಬರ್ 27, 28 ಮತ್ತು 29ರಂದು ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನವನ್ನು ಭಾರತದ ರಾಜಧಾನಿ ನವದೆಹಲಿಯಲ್ಲಿ ಏರ್ಪಡಿಸಲಾಗಿದೆ.

1997ರ ಅಕ್ಟೋಬರ್ 17, 18 ಮತ್ತು 19ರಂದು ಮೂರು ದಿವಸಗಳ ಕಾಲ ಲಾಲ್ ಕಿಲ್ಲಾ (ಕೆಂಪು ಕೋಟೆ) ಮೈದಾನದಲ್ಲಿ 5ನೆಯ ಬಸವ ಧರ್ಮ ಸಮ್ಮೇಳನವನ್ನು ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆಯಿತು. 2005ರ ಅಕ್ಟೋಬರ್ 21, 22, 23ರಂದು ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ಲಾಲ್ ಕಿಲ್ಲಾ ಮೈದಾನದ ಸಮೀಪದ ದರಿಯಾ ಗಂಜ್‌ದಲ್ಲಿರುವ ಮಹಾವೀರ ವಾಟಿಕಾದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಇದೀಗ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನವನ್ನು 2007ನೆಯ ಇಸವಿಯ ಅಕ್ಟೋಬರ್ 27, 28, 29 - ಶನಿವಾರ, ಭಾನುವಾರ, ಸೋಮವಾರದಂದು ಏರ್ಪಡಿಸಲಾಗಿದೆ.

ಭಾಗವಹಿಸುವವರಿಗೆ ಸೂಚನೆಗಳು

ಪ್ರತಿನಿಧಿ ಶುಲ್ಕ ಒಬ್ಬರಿಗೆ 600ರೂಗಳು. ಅಕ್ಟೋಬರ್ 26ರ ಮಧ್ಯಾಹ್ನದಿಂದ 29ರ ರಾತ್ರಿಯವರೆಗೆ ಊಟದ ವ್ಯವಸ್ಥೆಯನ್ನು ಮಾಡುವ ಜವಾಬ್ದಾರಿ ಸಮ್ಮೇಳನ ಸಮಿತಿಯದಾಗಿರುತ್ತದೆ. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟ ವ್ಯವಸ್ಥೆ ಮಾಡಲಾಗುತ್ತದೆ.

ನವ ದೆಹಲಿಯಲ್ಲಿ ಕಳೆದ ವರ್ಷ ಪ್ರಾರಂಭಗೊಂಡ ಅಕ್ಷರ ಧಾಮ ನೋಡಲು ಅರ್ಹವಾದ ಸ್ಥಳ. ಮಹಾತ್ಮಾ ಗಾಂಧಿ ಮತ್ತು ನೆಹರೂ ಸ್ಮಾರಕಗಳು ಸಹ ವಿಶೇಷವಾಗಿ ಇವೆ. ಈ ಎಲ್ಲಾ ಸ್ಥಳಗಳನ್ನು ನೋಡಲು ಕನಿಷ್ಠ 2 ದಿನಗಳಾದರೂ ಬೇಕು. ಆದ್ದರಿಂದ ಹೆಚ್ಚಿಗೆ 3-4 ದಿನ ಉಳಿಯಬೇಕು ಎನ್ನುವವರು ಇನ್ನು 400ರೂಗಳನ್ನು ಹೆಚ್ಚುವರಿಯಾಗಿ ಸೇರಿಸಿ, 1000ರೂಗಳನ್ನು ಕಟ್ಟಬೇಕು. ಪ್ರತ್ಯೇಕವಾಗಿ ಹೋಟೆಲ್‌ಗಳನ್ನು ಬುಕ್ ಮಾಡಿಕೊಳ್ಳಬೇಕು ಎನ್ನುವವರು ಪ್ರತಿನಿಧಿ ಶುಲ್ಕ 600ರೂ ಕಟ್ಟಿದರೆ ಸಾಕು. ಇನ್ನು ಹೆಚ್ಚುವರಿಯಾಗಿ ಅಥವಾ ತಮ್ಮ ಶಕ್ತ್ಯಾನುಸಾರ ಕಾಣಿಕೆ ಕೊಡುವವರು ಕೊಡಬಹುದು.

1. ಪ್ರತಿನಿಧಿ ಶುಲ್ಕವನ್ನು ಆದಷ್ಟು ಬೇಗನೆ ಕಳಿಸಿ ವಿವರಗಳನ್ನು ನೀಡಬೇಕು. ಏಕೆಂದರೆ ವಾಸ್ತವ್ಯಕ್ಕಾಗಿ ನಾವು ಹಾಲ್‌ಗಳನ್ನು ಬುಕ್ ಮಾಡಬೇಕಾಗುತ್ತದೆ. ಕಳೆದ ಎರಡೂ ಸಲ ಲಾಲ್ ಕಿಲ್ಲಾ ಮೈದಾನಕ್ಕೆ ಹತ್ತಿರದಲ್ಲಿ ಸಮ್ಮೇಳನ ಮಾಡಿದ್ದರಿಂದ ಅಲ್ಲಿ ಧರ್ಮಶಾಲೆಗಳು ಬಹಳ ಇರುವುದರಿಂದ ವಸತಿಯು ಸುಲಭವಾಗಿ ಸಿಕ್ಕಿತು. ಈ ಸಲ ಬಸವ ಮಂಟಪಕ್ಕೆ ಹತ್ತಿರದಲ್ಲಿರುವ ಮೈದಾನದಲ್ಲಿ ಸಮ್ಮೇಳನ ಮಾಡಲಾಗುತ್ತಿರುವುದರಿಂದ ಈ ಸ್ಥಳಕ್ಕೆ ಹತ್ತಿರದಲ್ಲಿರುವಂತೆ ವಸತಿ ವ್ಯವಸ್ಥೆ ಮಾಡಬೇಕಾಗುತ್ತದೆ.

2. ಸಮ್ಮೇಳನ ಸ್ಥಳಕ್ಕೆ ಸಮೀಪವಿರುವ ಲಾಡ್ಜಿಂಗ್ ಬೇಕು ಎನ್ನುವವರು ಸಹ ಮೊದಲೇ ತಿಳಿಸಬೇಕು. ಇವರಿಂದ ಲಾಡ್ಜಿಂಗ್ ಬಾಡಿಗೆಯ ಜೊತೆ ಸರ್ವಿಸ್‌ಚಾರ್ಜು ಸಹ ಪಡೆಯಲಾಗುವುದು. ಕೆಲವರು ಬಹಳ ಕ್ಷುಲ್ಲಕ ರೀತಿಯಲ್ಲಿ ಹಣ ಕೊಡುವಾಗ ವರ್ತಿಸುವುದುಂಟು. ಬುಕ್ ಮಾಡಲು ಎಷ್ಟು ಸಲ ಓಡಾಡಬೇಕಾಗುತ್ತದೆ. ಮತ್ತು ಅಲ್ಲೆಲ್ಲ ಮೊದಲೇ ಹಣ ಕಟ್ಟಿದರೆ ಮಾತ್ರ ಬುಕ್ ಮಾಡಿಕೊಳ್ಳುತ್ತಾರೆ. ಹಾಗೆಯೇ ಹೆಸರು ಬರೆಸಿ ಬಿಡಲು ಅವು ಸರ್ಕಾರಿ ಅತಿಥಿ ಗೃಹಗಳಲ್ಲ. ಮತ್ತೆ ಕೆಲವರು ಫೋನ್ ಮೂಲಕ ಹೇಳುತ್ತಾರೆ. ನಂಬಿ ಅವರ ಪರವಾಗಿ ಹಣ ಕಟ್ಟುತ್ತೇವೆ. ಕಡೆಯ ಕ್ಷಣದಲ್ಲಿ ತಮಗೆ ಬರಲು ಆಗುತ್ತಿಲ್ಲ ಎನ್ನುತ್ತಾರೆ. ಆಗ ಯಾರೂ ಆ ಕೋಣೆಗೆ ಬರದೆ ಇದ್ದರೆ ಕಟ್ಟಿದ ನಮಗೆ ನಷ್ಟವಾಗುತ್ತದೆ. ಕಳೆದೆರಡು ಸಲದ ಅನುಭವದ ಮೇಲೆ ಈ ಬಗ್ಗೆ ಮುನ್ನೆಚ್ಚರಿಕೆ ವಹಿಸಲಾಗುತ್ತಿದೆ.

3. ಸಮ್ಮೇಳನಗಳನ್ನು ನಾವು ಕಡಿಮೆ ಮಾಡಿದ್ದೇಕೆ ಎಂದರೆ ಅನೇಕರು ಪ್ರತಿನಿಧಿ ಶುಲ್ಕವನ್ನು ಕೊಡದಿರುವುದು. ಶರಣ ಮೇಳ, ಕಲ್ಯಾಣ ಪರ್ವಕ್ಕೆ ಧಾವಿಸಿದಂತೆ ದೆಹಲಿ ಸಮ್ಮೇಳನಕ್ಕೂ ಬಂದರೆ ನಾವು ಖರ್ಚುವೆಚ್ಚವನ್ನು ಹೇಗೆ ನಿಭಾಯಿಸಬೇಕು ? ಊರು ತಿರುಗಲು, ಸಾಮಾನು ಖರೀದಿಸಲು ಹಣ ಇರುತ್ತದೆ. ಪ್ರತಿನಿಧಿ ಶುಲ್ಕ ತುಂಬಲು ಇರದು. ಧರ್ಮ ಸಂಸ್ಥೆಗೆ ಕೊಡಬೇಕಾದ ಶುಲ್ಕದ ಹಣದಲ್ಲಿ ಉಳಿಸಿಕೊಂಡು ವೈಯಕ್ತಿಕ ಸಾಮಾನು ಖರೀದಿಗೆ ಬಳಸಬೇಕೆಂಬ ಕ್ಷುಲ್ಲಕ ಮನೋಭಾವ ಕೆಲವರದು. ಈ ರೀತಿ ಮಾಡಬಾರದು. ಅದರಿಂದ ನಮಗೆ ಸಮ್ಮೇಳನ (ಶಿಬಿರ)ಗಳನ್ನು ನಡೆಸುವ ಉತ್ಸಾಹ ಕಡಿಮೆಯಾಗಿದೆ. ಶರಣ ಮೇಳ, ಕಲ್ಯಾಣ ಪರ್ವ, ಅಲ್ಲಮ ಗಿರಿಯ ಗಣ ಮೇಳಕ್ಕೆ ನಿರ್ಬಂಧ ವಿಧಿಸುವುದಿಲ್ಲ. ಆದರೆ ಪರವೂರಿನಲ್ಲಿ ಮಾಡುವಾಗ, ಎಲ್ಲ ಸಾಮಾನುಗಳು ತುಟ್ಟಿಯಾಗಿರುವ ಈ ಕಾಲದಲ್ಲಿ, ಸಮ್ಮೇಳನಗಳನ್ನು ಮಾಡುವುದು ಎಷ್ಟು ಶ್ರಮದ ಕೆಲಸ ಎಂಬುದನ್ನು ಶರಣ ಬಂಧುಗಳು ಮನಗಾಣಬೇಕು.

ಬೇಗನೆ ಪ್ರತಿನಿಧಿ ಶುಲ್ಕವನ್ನು ಕಳಿಸಿದರೆ ಗುರುತಿನ ಚೀಟಿ (Identity Card) ಕಳಿಸಿಕೊಡಲು ಸಾಧ್ಯವಾಗುವುದು. ಅದರಲ್ಲಿ ಕ್ರಮ ಸಂಖ್ಯೆ, ಸಂಸ್ಥೆಯ ವಿಳಾಸ, ದೂರವಾಣಿ ಸಂಖ್ಯೆ ಮುಂತಾದ ವಿವರಗಳು ಇರುತ್ತವೆ.

4. ಸಮ್ಮೇಳನಕ್ಕೆ ಬಂದವರು 3 ದಿನ ತಪ್ಪದೆ ಭಾಗಿಯಾಗಿ ನಂತರ ದೆಹಲಿ ಸುತ್ತಮುತ್ತಲಿನ ಸ್ಥಳ ನೋಡಲು ಹೋಗಬೇಕು. ಭಾಗವಹಿಸಿದ ಅಲ್ಲಿನ ಅತಿಥಿಗಳಿಗೆ ನಮ್ಮ ಧರ್ಮ - ಸಂಸ್ಕೃತಿ - ಸಮಾಜಗಳ ಪರಿಚಯ ಮಾಡಿಕೊಡಬೇಕೆಂಬ ಹಂಬಲ, ಉತ್ಸಾಹ ನಮ್ಮದಾಗಿರುತ್ತದೆ. ಆಗ ಇಲ್ಲಿಂದ ಬಂದವರು ಬರೀ ಊರು ತಿರುಗುತ್ತಿದ್ದರೆ ಪ್ರಯೋಜನವೇನು? ಕೇವಲ ಊರು ನೋಡಲು ಬರುವುದೇ ಆದರೆ ದೆಹಲಿ ಯಾವಾಗಲೂ ಇರುತ್ತದೆ. ಬೇರೆ ಸಮಯದಲ್ಲಿ ಹೋಗಿ, ಬರಬಹುದು. ಆದ್ದರಿಂದ ಅನ್ಯರ ಎದುರು ನಮ್ಮ ಶಿಸ್ತು, ಒಗ್ಗಟ್ಟು, ಸಂಸ್ಕೃತಿಯನ್ನು ತೋರಿಸುವುದು ಅವಶ್ಯವಿರುತ್ತದೆ.

5. ಬೆಂಗಳೂರಿನಿಂದ ದೆಹಲಿಗೆ ನೇರವಾಗಿ ಹೋಗುವವವರಿಗೆ ರೇಲ್ವೆ ರಿಸರ್ವೇಷನ್‌ಗೆ ನೆರವು ನೀಡಲಾಗುವುದು.

ಬೆಲೆ : ಹೋಗುವ, ಮರಳಿ ಬರುವ ಟಿಕೆಟ್ (ಎರಡೂ ಕಡೆ ಸೇರಿ) 1200-00
60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ (ಎರಡೂ ಕಡೆ ಸೇರಿ) 900-00
(ಇವರು 60 ವರ್ಷ ಮೇಲಿನವರೆಂದು ಸಿದ್ಧ ಪಡಿಸಲು ಏನಾದರೂ ದಾಖಲೆ ತರಬೇಕು)

ಹೋಗುವಾಗ ಎಲ್ಲರೂ ಒಟ್ಟಿಗೆ ಹೋದರೂ ಬರುವಾಗ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಬರುವುದರಿಂದ ವಾಪಸು ಬರುವ ದಿನವನ್ನು ತಿಳಿಸಬೇಕು. ತಡ ಮಾಡಿದರೆ ರಿಸರ್ವೇಷನ್ ಸಿಗುವುದು ಬಹಳ ಕಷ್ಟ. ಬೇಗನೆ ನಿರ್ಧಾರ ತೆಗೆದುಕೊಳ್ಳದೆ ಕೆಲವರು ಹಿಂದಿನ ಸಮ್ಮೇಳನದ ಅವಕಾಶವನ್ನು ಕಳೆದುಕೊಂಡರು.

ರೇಲ್ವೆ ರಿಸರ್ವೇಷನ್‌ಗೆ ಸಂಪರ್ಕಿಸಬೇಕಾದವರು : ಇಂದು ಶೇಖರ್ - 9945684230.

ವಿ.ಸೂ : ಇಲ್ಲಿ ಕೊಟ್ಟಿರುವುದು ಕೇವಲ ರೇಲ್ವೆ ಛಾರ್ಜು. ಇದರಲ್ಲಿ ಪ್ರತಿನಿಧಿ ಶುಲ್ಕ ಸೇರಿಸಿಲ್ಲ. ಅದನ್ನು ಪ್ರತ್ಯೇಕವಾಗಿ ಕೊಡಬೇಕು.

6.ಈಗ ವಿಮಾನ ಕಂಪನಿಗಳ ಸಂಖ್ಯೆ ಹೆಚ್ಚಿ, ಸ್ಪರ್ಧೆ ಏರ್ಪಟ್ಟಿರುವುದರಿಂದ ಮೊದಲಿಗಿಂತಲೂ ದರಗಳು ಕಡಿಮೆ ಇವೆ. ವಿಮಾನದಲ್ಲಿ ಹೋಗಿ ಬರಬೇಕು ಎನ್ನುವವರು ದೂರವಾಣಿ ಮೂಲಕ ತಿಳಿಸಬೇಕು. ರೇಟನ್ನು ತಿಳಿಸಲಾಗುವುದು. ಒಪ್ಪಿಗೆಯಾದರೆ ತಕ್ಷಣ ಹಣ ಕಳಿಸಿಕೊಡಬೇಕು. ರೇಟು ಇಷ್ಟೇ ಎಂದು ಹೇಳಲಾಗುವುದಿಲ್ಲ. ನಿಗದಿತ ದರ ಒಂದೇ ಇದ್ದರೂ ಸ್ಪರ್ಧೆಯ ಮೇಲೆ ಕಡಿಮೆಗೂ ಸಿಕ್ಕಬಹುದು. ಪ್ರತಿ ಗಂಟೆಗೂ ದರದಲ್ಲಿ ವಿವಿಧ ಏರಲೈನ್ಸ್‌ನಲ್ಲಿ ಸ್ಪರ್ಧಾತ್ಮಕ ಬದಲಾವಣೆ ಇರುತ್ತದೆ. ದೂರವಾಣಿ : 080-23325335

7. ಸಮ್ಮೇಳನ ಪ್ರತಿನಿಧಿ ಶುಲ್ಕ ಊಟ- ವಸತಿ ಸೇರಿ, 600 ರೂ. ಸಾಮೂಹಿಕ ವಸತಿ-ವ್ಯವಸ್ಥೆ ಇರುತ್ತದೆ.

ವಿಶೇಷ ಸೂಚನೆ: 1997ರ ಸಮ್ಮೇಳನದ ಸಮಯದಲ್ಲಿ ಕೆಲವರು ಪ್ರಮುಖರು ಸಂಗ್ರಹಿಸಿದ ಪ್ರತಿನಿಧಿ ಶುಲ್ಕವನ್ನು ಕೊಡದೆ ಆ ಹಣವನ್ನು ಸ್ವಂತಕ್ಕೆ ಬಳಕೆ ಮಾಡಿಕೊಂಡರು. ಇದರಿಂದ

ಸಮ್ಮೇಳನ ಸಮಿತಿಗೆ ತೊಂದರೆಯಾಯಿತಲ್ಲದೆ ಸ್ಥಳೀಯವಾಗಿ ರಾಷ್ಟ್ರೀಯ ಬಸವ ದಳಗಳ ಪದಾಧಿಕಾರಿಗಳಲ್ಲಿ ಒಡಕು ಉಂಟಾಯಿತು. ಆದ್ದರಿಂದ ಈಗ ರಸೀತಿ ಪುಸ್ತಕಗಳನ್ನು ಕಳಿಸಲಾಗುವುದಿಲ್ಲ. ಕೇವಲ ಅರ್ಜಿ ಫಾರ್ಮುಗಳನ್ನು ಮಾತ್ರ ಆಯ್ದ ನೇತಾರರಿಗೆ ಕಳಿಸಲಾಗುವುದು. ಕಲ್ಯಾಣ ಕಿರಣದ ಸೆಪ್ಟಂಬರ್ ಸಂಚಿಕೆಯ 24 ಮತ್ತು 25ನೆಯ ಪುಟದಲ್ಲಿ ಅರ್ಜಿಯ ಮಾದರಿ ಇದೆ. ಪ್ರತಿನಿಧಿ ಶುಲ್ಕವನ್ನು ಜನರೇ ನೇರವಾಗಿ ಮೊದಲೇ ಕಳಿಸಿ, ಐಡೆಂಟಿಟಿ ಕಾರ್ಡ್ ಪಡೆದುಕೊಳ್ಳಬೇಕು ಅಥವಾ ವಿಶ್ವಾಸವಿರುವ ನೇತಾರರನ್ನು ಆಯ್ಕೆ ಮಾಡಿಕೊಂಡು ಅವರ ಮೂಲಕ ಭಾಗವಹಿಸುವ ಎಲ್ಲರ ಹಣವನ್ನು ಮೊದಲೇ ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬೇಕು ಅಥವಾ ಬೆಂಗಳೂರಿಗೆ ಬಂದು ನಗದು ಕಟ್ಟಿ ರಸೀತಿ ಪಡೆಯಬೇಕು.

8. ಪ್ರತ್ಯೇಕ ರೂಂಗಳ ವ್ಯವಸ್ಥೆ ಬೇಕಾದವರು ಬೇರೆಯಾಗಿ ಹಣವನ್ನು ಮೊದಲೇ ಕಟ್ಟಬೇಕು. ಈ ಹಣವನ್ನು ಸಹ ಪ್ರತಿನಿಧಿ ಶುಲ್ಕ ಅಥವಾ ಅದಕ್ಕೂ ಮೀರಿದ ಕಾಣಿಕೆ ಕೊಡುವವರು ಮೊದಲೇ ಕಳಿಸಬೇಕು. ಏಕೆಂದರೆ ಪ್ರತ್ಯೇಕ ಕೋಣೆಗಳನ್ನು ಮೊದಲೇ ಕಾಯ್ದಿರಿಸಬೇಕಾಗುತ್ತದೆ. ಯಾವ ದಿನಾಂಕದಿಂದ ಯಾವ ದಿನಾಂಕಕ್ಕೆ ಬೇಕು ಎನ್ನುವುದನ್ನು ಸಹ ಮೊದಲೇ ತಿಳಿಸಬೇಕು. ಈ ಬಗ್ಗೆ ಇನ್ನಷ್ಟು ವಿವರಗಳನ್ನು ಇದೇ ಕಲ್ಯಾಣ ಕಿರಣದಲ್ಲಿ ಪ್ರತ್ಯೇಕವಾಗಿ ಕೊಡಲಾಗುವುದು.

9. ಬೆಂಗಳೂರಿನಿಂದ ದೆಹಲಿಗೆ ಕರ್ನಾಟಕ ಎಕ್ಸ್‌ಪ್ರೆಸ್ (ಪ್ರಯಾಣ 39 ತಾಸು) ಮಾತ್ರವಲ್ಲದೆ ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ ವೇಗವಾಗಿ ಮತ್ತು ನೇರವಾಗಿ ಸಾಗಿ ಕೇವಲ 35 ತಾಸುಗಳಲ್ಲಿ ತಲುಪುತ್ತದೆ. ಕರ್ನಾಟಕ ಎಕ್ಸ್‌ಪ್ರೆಸ್ ಬೆಂಗಳೂರಿನಿಂದ ಸಂಜೆ 7-15 ಬಿಟ್ಟು ಒಂದೂವರೆ ದಿನ ಪ್ರಯಾಣಿಸಿ ಬೆಳಿಗ್ಗೆ 10-00 ಕ್ಕೆ ದೆಹಲಿ ತಲುಪುತ್ತದೆ. ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ (ಕರ್ನಾಟಕ ಸಂಪರ್ಕ ಕ್ರಾಂತಿ) ಯಶವಂತಪುರದಿಂದ ರಾತ್ರಿ 10-20ಕ್ಕೆ ಬಿಟ್ಟು ಒಂದೂವರೆ ದಿನ ಪಯಣಿಸಿ ಬೆಳಿಗ್ಗೆ 9 ಗಂಟೆಗೆ ದೆಹಲಿ ತಲುಪುತ್ತದೆ. ಟ್ರೇನುಗಳು ನಯಿದಿಲ್ಲಿ ರೇಲ್ವೆ ಸ್ಟೇಷನ್ ಮತ್ತು ನಿಜಾಮುದ್ದೀನ್ ರೇಲ್ವೆ ಸ್ಟೇಷನ್‌ನಲ್ಲಿ ನಿಲ್ಲುತ್ತವೆ. ಅಲ್ಲಿಂದ ಸಮ್ಮೇಳನ ಸಮಿತಿಯು ವ್ಯವಸ್ಥೆ ಮಾಡಿರುವ ವಸತಿ ಗೃಹಕ್ಕೆ ಹೋಗಬೇಕಾದರೆ ಲೋಕಲ್ ಬಸ್ ಮಾಡಬೇಕಾಗುತ್ತದೆ. ಅದರ ವೆಚ್ಚವನ್ನು ಪ್ರತಿನಿಧಿಗಳೇ ಭರಿಸಬೇಕು. ಕಳೆದ ಸಲ ನಮ್ಮ ಜನರಿಗೆ ಅನುಕೂಲವಾಗಲೆಂದು ನಾವು ಒಂದು ಕಂಪನಿಯ ಜೊತೆ ಮಾತನಾಡಿ ಹಣವನ್ನು ಮೊದಲೇ ಕಟ್ಟಿದ್ದೆವು. ಟ್ರೇನ್ ಇಳಿದು ಜನರು ಗುಂಪು ಗುಂಪಾಗಿ ಬೇರೆ ಆದುದರಿಂದ ಈ ವಿಷಯ ತಿಳಿಸಲು ಆಗಲೇ ಇಲ್ಲ. ಆ ಡ್ರೈವರ್ ಮತ್ತು ಕಂಡಕ್ಟರ್ ಜಗಳವಾಡಿ ಜನರಿಂದ ಪುನಃ ಹಣವನ್ನು ವಸೂಲಿ ಮಾಡಿದ್ದರು. ನಮ್ಮ ಹಣವೂ ಹೋಯಿತು, ಜನರ ಹಣವೂ ಹೋಯಿತು. ಲೋಕಲ್ ಬಸ್‌ಗಳು ರೇಲ್ವೆ ಸ್ಟೇಷನ್ ಹೊರಗೆ ಇರುತ್ತವೆ. ಆಗಲೇ ರೇಟು ಮಾತನಾಡಿ ಉಪಯೋಗಿಸಿ ಕೊಳ್ಳಬಹುದು. ಮೆಟ್ರೋ ಸ್ಟೇಷನ್‌ಗೆ ಹತ್ತಿರದಲ್ಲೇ ಸಮ್ಮೇಳನ ಸ್ಥಳ, ವಾಸ್ತವ್ಯ ಸ್ಥಳ, ಬಸವ ಮಂಟಪ ಇವೆ. ನಂತರ ಅದರಲ್ಲೇ ಓಡಾಡಬಹುದು. ಆದರೆ ಮೊದಲ ಬಾರಿ ಬಂದಾಗ ಲಗೇಜು ಸಹಿತ ಹತ್ತಲು ಇಳಿಯಲು ಅನಾನುಕೂಲವಾಗುತ್ತದೆ. ಆದ್ದರಿಂದ ಊರಿನಿಂದ ಬಂದ ತಕ್ಷಣ ಕಾಂಟ್ರ್ಯಾಕ್ಟ್ ಬಸ್ಸುಗಳನ್ನು ಉಪಯೋಗಿಸಿಕೊಳ್ಳುವುದೇ ಒಳ್ಳೆಯದು.

10. ರಾಷ್ಟ್ರೀಯ ಬಸವ ದಳ, ಗಣಾಚಾರ ದಳದ ಕಾರ್ಯಕರ್ತರು ಒಂದೆರಡು ದಿವಸ ಮೊದಲೇ ಬಂದರೆ ಸೇವೆ ಮಾಡಲು, ಬಂದವರಿಗೆ ಸೂಚನೆ ನೀಡಲು ಅನುಕೂಲವಾಗುತ್ತದೆ. ಒಂದೆರಡು ದಿವಸ ಮೊದಲೇ ಬರುವ ಸಾಧ್ಯತೆ ಇರುವ ಸ್ವಯಂ ಸೇವಕರು ತಮ್ಮ ಹೆಸರುಗಳನ್ನು ಬೆಂಗಳೂರು ಕಾರ್ಯಾಲಯಕ್ಕೆ ತಿಳಿಸಬೇಕು. ದೆಹಲಿಯಲ್ಲಿ ಇನ್ನೂ ಚಳಿ ಶುರುವಾಗಿರುವುದಿಲ್ಲ. ಆದ್ದರಿಂದ ಪ್ರತಿನಿಧಿಗಳು ರಗ್ಗು ಮುಂತಾಗಿ ಹೆಚ್ಚಿಗೆ ಲಗೇಜು ತರುವ ಅಗತ್ಯವಿರುವುದಿಲ್ಲ. ಊಟದ ತಟ್ಟೆ, ಲೋಟ ಜೊತೆಗೆ ತಂದರೆ ಒಳ್ಳೆಯದು.

11. ಸಮ್ಮೇಳನ ನಡೆಯುವ ಸ್ಥಳ ಎಂ.ಸಿ.ಡಿ.ಬರಾತ್ ಘರ್ ಕಮ್ಯುನಿಟಿ ಹಾಲ್, ಪಾಲಮ್-ದಾಬಡಿ ಮೇನ್ ರೋಡ್.

12. ಶರಣ (ಶನಿ)ವಾರ ದಿ.27-10-2007ರಂದು ಬೆಳಿಗ್ಗೆ 10-30ಕ್ಕೆ ಸಮ್ಮೇಳನ ಉದ್ಘಾಟನೆ.ಮಧ್ಯಾಹ್ನ 2-30ರಿಂದ 4-30 ಪ್ರಸಾದ/ ವಿಶ್ರಾಂತಿ , ಸಂಜೆ 5-30 ರಿಂದ ಭಾರತೀಯ

ಧರ್ಮಗಳ ಒಕ್ಕೂಟದಿಂದ ಚಿಂತನ ಗೋಷ್ಠಿ; ದಿ.28-10-2007 ಬೆಳಿಗ್ಗೆ 10-30 ಶರಣ ಸಂಗಮ - ಸಾಮೂಹಿಕ ಪ್ರಾರ್ಥನೆ; ದಿ.29-10-2007ರಂದು ಸಾಮೂಹಿಕ ಇಷ್ಟಲಿಂಗಾರ್ಚನೆ , ಪ್ರಸಾದದ ನಂತರ 2-30ರಿಂದ ಮೆರವಣಿಗೆ ಹಾಗೂ ಪಥ ಸಂಚಲನ; ಸಂಜೆ 5-30ರಿಂದ ಸಮಾರೋಪ ಸಮಾರಂಭ. ಬಸವ ಮಂಟಪ ಪ್ರಥಮ ವಾರ್ಷಿಕೋತ್ಸವ.

13. ಸಮ್ಮೇಳನ ಪ್ರತಿನಿಧಿಗಳು ಕಡ್ಡಾಯವಾಗಿ ಬಿಳಿಯ ವಸ್ತ್ರ ಕಾವಿಯ ಸ್ಕಾರ್ಫ್ ಮತ್ತು ಬ್ಯಾಡ್ಜ್ ಧರಿಸಿರಬೇಕು. ಐಡೆಂಟಟಿ ಕಾರ್ಡ್ - ಗುರುತಿನ ಚೀಟಿ ಹೊಂದಿರಬೇಕು. (ಹಿಂದಿನ ಸಮ್ಮೇಳನದಲ್ಲಿ ಸ್ಕಾರ್ಫ್‌ಗಳು ಕಳೆದು ಕೊಂಡವರನ್ನು ಗುರುತಿಸಲು ಬಹಳ ಸಹಕಾರಿಯಾಗಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು)

ಧನ ಸಹಾಯಕ್ಕೆ ವಿನಂತಿ

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನವನ್ನು ಸಂಯೋಜಿಸಲಾಗಿದ್ದು ಇದರ ಯಶಸ್ವಿ ನಿರ್ವಹಣೆಗಾಗಿ ಸಹೃದಯರು, ಸದ್ಭಕ್ತರಿಂದ ಉದಾರವಾದ ದೇಣಿಗೆಯನ್ನು ಕೋರುತ್ತೇವೆ.

ಮಹಾ ಪೋಷಕರು	: ರೂ 10,000/-	(ಹತ್ತು ಸಾವಿರ ಹಾಗೂ ಮೇಲ್ಪಟ್ಟು)
ಪೋಷಕರು	: ರೂ 5,000/-	(ಐದು ಸಾವಿರ ಹಾಗೂ ಮೇಲ್ಪಟ್ಟು)
ವಿಶೇಷ ದಾನಿಗಳು	: ರೂ 3,000/-	(ಮೂರು ಸಾವಿರ ಹಾಗೂ ಮೇಲ್ಪಟ್ಟು)
ದಾನಿಗಳು	: ರೂ 1,000/-	(ಒಂದು ಸಾವಿರ ಹಾಗೂ ಮೇಲ್ಪಟ್ಟು)
ಪ್ರತಿನಿಧಿ ಶುಲ್ಕ	: ರೂ 600/-	(ಆರು ನೂರು ಹಾಗೂ ಮೇಲ್ಪಟ್ಟು)
ಹಿತೈಷಿಗಳು	: ರೂ 500/-	(ಐದು ನೂರು ಹಾಗೂ ಮೇಲ್ಪಟ್ಟು)

ಸ್ವಯಂ ಪ್ರೇರಣೆಯಿಂದ ದೇಣಿಗೆಯನ್ನು ಎಷ್ಟಾದರೂ ಕೊಡಲು ಅವಕಾಶ ಉಂಟು. ಪ್ರಥಮ ಮಹಿಳಾ ಜಗದ್ಗುರುಗಳು ಕೂಡಲ ಸಂಗಮದ ಬಸವ ಧರ್ಮ ಪೀಠದ ಅಧ್ಯಕ್ಷರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವ ಮತ್ತು ಮಾರ್ಗದರ್ಶನದಲ್ಲಿ ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನವು ನಡೆಯಲಿದ್ದು ಅನೇಕ ರಾಜಕೀಯ ನೇತಾರರು, ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಉದಾರವಾಗಿ ದೇಣಿಗೆ ನೀಡಿ, ಸಮ್ಮೇಳನದ ಯಶಸ್ಸಿಗೆ ಸಹಕರಿಸಲು ಕೋರುತ್ತೇವೆ.

ಪ್ರತಿನಿಧಿ ಶುಲ್ಕ, ಕಾಣಿಕೆ ಇತ್ಯಾದಿ ಕಳುಹಿಸುವವರು ಕೆಳಕಂಡಂತೆ ಬ್ಯಾಂಕ್ ಡ್ರಾಫ್ಟ್ ಬರೆಯಬೇಕು. ಪರವೂರಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

1. Basava Mahamane Charitable Trust,
   Payable at BANGALORE. ಅಥವಾ
2. Basava Mahamane Charitable Trust
   Payable at NEW DELHI

ವ್ಯವಹರಿಸುವ ವಿಳಾಸಗಳು :

1. ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ,
   ಬಸವ ಮಂಟಪ, 2035, 20ನೇ ಮೇನ್, 2ನೇ ಬ್ಲಾಕು, ರಾಜಾಜಿ ನಗರ,
   ಬೆಂಗಳೂರು-560010, ಕರ್ನಾಟಕ ರಾಜ್ಯ
   ದೂರವಾಣಿ: 080-23325335/23131476/ 9449588669
2. Pujya Sri Channabasavananda Swamiji
   General Secretary, Basava Mahamane Charitable Trust
   Mata Ashram, Basava Mantap
   H-3/82, Bengali Colony,
   Mahavir Enclave, New Delhi-110045
   Ph: 011-64563860, 0-9212627150



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಇಪ್ಪತ್ತೊಂದನೆಯ

ಶರಣ ಮೇಳ

2008ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತೊಂದನೆಯ ಶರಣ ಮೇಳವು 2008ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹ -ದೊಡನೆ, ಅನ್ನದಾಸೋಹವನ್ನು ಅಚ್ಚು ಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮ ಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ

ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-23325335/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268038/268007/268338

ದೆಹಲಿ ಸಮ್ಮೇಳನದ ನಂತರ ಹಾಕಿಕೊಳ್ಳಬಹುದಾದ ಪ್ರವಾಸಗಳ ವಿವರ

ದೇಶವನ್ನು ತಿರುಗಿ ನೋಡು ಕೋಶವನ್ನು ಓದಿ ನೋಡು ಎಂಬುದು ಪುರಾತನ ಜಾಣ್ನುಡಿ. ಅದರಲ್ಲಿಯೂ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಪ್ರವಾಸವಂತೂ ಭಾರತದ ನಾಡು, ನುಡಿ, ಸಂಸ್ಕೃತಿಗಳ ಪೂರ್ಣ ದರ್ಶನ ಮಾಡಿಸುತ್ತದೆ. ದೆಹಲಿಯ ಸುತ್ತಮುತ್ತ ನೋಡಬಹುದಾದ ಸ್ಥಳಗಳ ವಿವರ ಕೆಳಗಿನಂತಿದೆ.

ದೆಹಲಿ ನಗರ

A 1.ದಿವಸ : ಲೋಟಸ್ ಟೆಂಪಲ್, ಕುತುಬ್ ಮಿನಾರ್, ಇಂದಿರಾ ಗಾಂಧಿ ಸ್ಮಾರಕ, ತೀನ್ ಮೂರ್ತಿ ಭವನ (ನೆಹರೂ ಮ್ಯೂಸಿಯಮ್), ಇಂಡಿಯಾ ಗೇಟ್, ಬಿರ್ಲಾ ಮಂದಿರ, ರಾಜಘಾಟ್, ಕೆಂಪು ಕೋಟೆ, ಸೀಸ್ ಗಂಜ್ ಗುರುದ್ವಾರ
ಛಾರ್ಜು : ಒಬ್ಬರಿಗೆ 200 ರೂ (ತಿಂಡಿ, ಊಟ ಸೇರಿ)

B 1.ದಿವಸ : ಅಕ್ಷರ ಧಾಮ ದೇವಾಲಯ, ಮೆಟ್ರೋ ರೇಲ್ ಸಂಚಾರ, ನ್ಯಾಷನಲ್ ಮೂಸಿಯಮ್, ರೇಲ್ ಮ್ಯೂಸ್ಯಿಯಮ್.ರಾಷ್ಟ್ರಪತಿ ಭವನ್, ಪಾರ್ಲಿಮೆಂಟ್ ಹೌಸ್. ಮುಂತಾದವನ್ನು ಹೊರಗಿನಿಂದ ತೋರಿಸಲಾಗುತ್ತದೆ. ಬಸವ ಪುತ್ಥಳಿ, ರಾಣಿ ಚನ್ನಮ್ಮ ಪುತ್ಥಳಿ ಇವನ್ನು ನೋಡಲು ವಿಶೇಷ ಪ್ರವೇಶ ಪತ್ರ ಪಡೆದು ತೋರಿಸಲಾಗುತ್ತದೆ.
ಛಾರ್ಜು : ಒಬ್ಬರಿಗೆ 200 =00 (ತಿಂಡಿ, ಊಟ ಸೇರಿ)

C ದೆಹಲಿ - ತಾಜ್‌ಮಹಲ್ - ಆಗ್ರಾ- ಮಥುರಾ - ದೆಹಲಿ
ಛಾರ್ಜು : 750 =00, ಬೆಳಿಗ್ಗೆ 7 ರಿಂದ ರಾತ್ರಿ 10ರವರೆಗೆ

D ದೆಹಲಿ, ಹರದ್ವಾರ, ಋಷಿಕೇಶ್, ಲಕ್ಷ್ಮಣ ಝೂಲಾ, ರಾಮ ಝೂಲಾ - ದೆಹಲಿ
ಛಾರ್ಜು : 650=00, ಹೊರಡುವ ವೇಳೆ : ರಾತ್ರಿ 10-00 ವಾಪಸ್ಸು ಮರುದಿನ ರಾತ್ರಿ 10 ಗಂಟೆ

E ದೆಹಲಿ- ಜೈಪುರ, ಅಜಮೀರ್, ಪುಷ್ಕರ್, ಫತೇಪುರ್ ಸಿಕ್ರಿ, ಆಗ್ರಾ, ಮಥುರಾ - ದೆಹಲಿ
ಛಾರ್ಜು : 2500 =00, 2ಹಗಲು 1 ರಾತ್ರಿ

F ದೆಹಲಿ, ಜೈಪುರ, ಅಜಮೀರ್, ಪುಷ್ಕರ್, ಫತೇಪುರ್ ಸಿಕ್ರಿ, ಆಗ್ರಾ, ಮಥುರಾ - ದೆಹಲಿ -
ಛಾರ್ಜು : 3200=00, 3 ಹಗಲು 2 ರಾತ್ರಿ (E ಮತ್ತು F ಮಧ್ಯೆ ಕೇವಲ ಕೋಚ್ ವ್ಯತ್ಯಾಸ)

G ದೆಹಲಿ, ಮಸ್ಸೂರಿ, ಹರದ್ವಾರ, ಋಷಿಕೇಶ್, ಲಕ್ಷ್ಮಣ ಝೂಲಾ, ರಾಮ ಝೂಲಾ-
2 ಹಗಲು 1 ರಾತ್ರಿ , ಛಾರ್ಜು : 2000=00

H ದೆಹಲಿ - ಸಿಮ್ಲಾ - ಮನಾಲಿ - ರೋಹಟಂಗ್ - ಚಂಡೀಗಢ - ಪಿಂಜೋರ್ ಗಾರ್ಡನ್ಸ್, ಕುರುಕ್ಷೇತ್ರ - ದೆಹಲಿ, ಛಾರ್ಜು : 9500=00, 7 ಹಗಲು 6 ರಾತ್ರಿ

I ದೆಹಲಿ - ಚಂಡೀಗಢ - ಮನಾಲಿ- ರೋಹಟಂಗ್ - ಧರ್ಮಶಾಲಾ - ಡಾಲ್ ಹೌಸಿ - ಖತ್ರ - ವೈಷ್ಣೋದೇವಿ, ವಾಘಾ ಬಾರ್ಡರ್ (ಭಾರತ- ಪಾಕಿಸ್ತಾನ ಬಾರ್ಡರ್) ಅಮೃತ ಸರ, ಕುರುಕ್ಷೇತ್ರ, ದೆಹಲಿ , ಛಾರ್ಜು : 13000=00, 9 ಹಗಲು 8 ರಾತ್ರಿ

J ದೆಹಲಿ- ಶ್ರೀ ನಗರ - ಪಹಲ್‌ಗಾಂವ - ಗುಲ್‌ಮಾರ್ಗ- ಅಮೃತ ಸರ - ವಾಘಾ ಬಾರ್ಡರ್ - ಕುರುಕ್ಷೇತ್ರ - ದೆಹಲಿ , ಛಾರ್ಜು : 11500=00 7 ಹಗಲು 6 ರಾತ್ರಿ

K ದೆಹಲಿ - ಬದರಿನಾಥ-ಕೇದಾರನಾಥ - ದೆಹಲಿ
ಛಾರ್ಜು : 6500=00, 7 ಹಗಲು 6 ರಾತ್ರಿ

L ದೆಹಲಿ - ಯಮುನೋತ್ರಿ - ಗಂಗೋತ್ರಿ - ಬದರಿನಾಥ - ಕೇದಾರನಾಥ - ದೆಹಲಿ
11 ಹಗಲು 10 ರಾತ್ರಿ

ದಾರಿಯಲ್ಲಿ ಹರದ್ವಾರ-ಲಕ್ಷ್ಮಣ ಝೂಲಾ - ಋಷಿಕೇಶ್ -ಯಮುನೋತ್ರಿ -ಕೇದಾರನಾಥ -ನಂದ ಪ್ರಯಾಗ -ಬದರಿನಾಥ - ದೇವಪ್ರಯಾಗ - ಗಂಗೋತ್ರಿ, ರುದ್ರ ಪ್ರಯಾಗ -ಗೌರಿಕುಂಡ, ಕರ್ಣ ಪ್ರಯಾಗ, ಜೋಷಿ ಮಠ, ಪಿಪಲ್ ಕೋಟಿ - ದೆಹಲಿ
ಛಾರ್ಜು : 8500=00, 11 ಹಗಲು 10 ರಾತ್ರಿ

M ದೆಹಲಿ -ಅಲಹಾಬಾದ- ವಾರಣಾಸಿ(ಕಾಶಿ), ಸಾರಾನಾಥ, ಗಯಾ, ಬುದ್ಧಗಯಾ, ಅಯೋಧ್ಯಾ -ಆಗ್ರಾ -ಮಥುರಾ -ದೆಹಲಿ
ಛಾರ್ಜು : 10,500 =00, 8 ಹಗಲು 7 ರಾತ್ರಿ

N ದೆಹಲಿ - ಅಮರನಾಥ - ಶ್ರೀನಗರ -ವೈಷ್ಣೋದೇವಿ -ಅಮೃತಸರ -ವಾಘಾ ಬಾರ್ಡರ್ -ದೆಹಲಿ, ಛಾರ್ಜು : 8900=00, 11 ದಿವಸ

O ಕಠಮಂಡು - ನೇಪಾಳ ಯಾತ್ರೆ, (ಈ ಯಾತ್ರೆಗೆ ಪಾಸ್‌ಪೋರ್ಟ್ ಹೊಂದಿರುವುದು ಕಡ್ಡಾಯ) ದೆಹಲಿ - ಕಠಮಂಡು - ದೆಹಲಿ , 4 ದಿವಸ 3 ರಾತ್ರಿ
ಛಾರ್ಜು : 3000=00 + ವಿಮಾನಯಾನ ದರ (5500-7000)

ವಿಶೇಷ ಸೂಚನೆ : ಒಂದು ಟೂರಿಸ್ಟ್ ಕಂಪೆನಿ ಪ್ರಕಟಿಸಿರುವ ದರ ವಿವರಗಳಿವು. A.C ಕೋಚ್ ಸೌಲಭ್ಯ ಮತ್ತು ದಕ್ಷಿಣ ಭಾರತದ ಅಡಿಗೆಯ ಅನುಕೂಲತೆ (ಒಂದು ಬಸ್ ಜನ ಪೂರ್ಣ ಆದರೆ) ನೀಡುವುದಾಗಿ ಹೇಳುತ್ತಿದ್ದಾರೆ. ಒಂದು ವೇಳೆ ಬಸ್ ಜನ ಪೂರ್ತಿ ಆಗದೆ ಇದ್ದರೆ ಚಿಕ್ಕ ಗುಂಪುಗಳಲ್ಲಿ ಕಾರು, ಟಾಟಾ ಸುಮೋ ಮುಂತಾಗಿ ಕೊಡುವರಂತೆ. ಆಗ ಊಟದ ಜವಾಬ್ದಾರಿ ಅವರದು ಇರುವುದಿಲ್ಲ. ಜನರಿಗೆ ಪ್ರೇಕ್ಷಣೀಯ ಸ್ಥಳಗಳ ಮಾಹಿತಿ ಸಿಗಲಿ ಎಂಬ ಉದ್ದೇಶದಿಂದ ಮಾಹಿತಿಯನ್ನು ಪ್ರಕಟಿಸಲಾಗಿದೆ.

ವಸತಿ ಸೌಲಭ್ಯದ ಮಾಹಿತಿ

1. ಸಮ್ಮೇಳನದ ಪ್ರತಿನಿಧಿಗಳಿಗೆ ಸಾಮೂಹಿಕವಾಗಿ ವಸತಿ ಸೌಲಭ್ಯ ನೀಡಲಾಗುವುದು.

2. ಪ್ರತ್ಯೇಕ ಕೋಣೆ ಬೇಕು ಎನ್ನುವವರು ಸಮೀಪದಲ್ಲಿರುವ ಲಾಡ್ಜಿಂಗ್ ಸೌಲಭ್ಯ ಪಡೆಯಬೇಕು.

3. ಕಳೆದೆರಡು ಸಲ ಲಾಲ್ ಕಿಲ್ಲಾ, ಚಾಂದನಿ ಚೌಕ್, ದರಿಯಾ ಗಂಜ್ ಪ್ರದೇಶಗಳಲ್ಲಿ ಲಾಡ್ಜಿಂಗ್ ಮತ್ತು ಧರ್ಮ ಶಾಲಾ ಹೆಚ್ಚು ಲಭ್ಯವಿದ್ದವು. ಈಗ ಸಮ್ಮೇಳನ ಮಾಡುತ್ತಿರುವಲ್ಲಿ ಕೋಣೆಗಳು ಲಭ್ಯವಿಲ್ಲ. ಈಗಾಗಲೇ ಮೊದಲೇ ಬೇಡಿಕೆ ಸಲ್ಲಿಸಿದವರಿಗೆ ಕೋಣೆ ಕಾಯ್ದಿರಿಸಲಾಗಿದೆ.

4. ದಾಬಡಿ- ಪಾಲಮ್ ಪ್ರದೇಶಕ್ಕೆ ಸನಿಹದಲ್ಲಿ ಪಹಾಡ್ ಗಂಜ್, ಕರೋಲ್ ಬಾಗ್, ರಾಮಕೃಷ್ಣ ಆಶ್ರಮ ಮಾರ್ಗ ಇಲ್ಲಿರುವ ಲಾಡ್ಜಿಂಗಗಳಲ್ಲಿ ವಸತಿ ಮಾಡಿ ಸಮ್ಮೇಳನ ಸ್ಥಳಕ್ಕೆ ಮೆಟ್ರೋದಲ್ಲಿ ಸುಲಭವಾಗಿ, ವೇಗವಾಗಿ ತಲುಪಬಹುದು.

5. ದರಿಯಾಗಂಜ್, ಲಾಲ್‌ಕಿಲ್ಲಾ ಸಮೀಪ ಕಳೆದ ಸಲ ಸಮ್ಮೇಳನ ಮಾಡಿದಾಗ ಅನೇಕ ಲಾಡ್ಜಿಂಗ್‌ಗಳು ಜನರಿಗೆ ಪರಿಚಿತವಾಗಿವೆ. ಅಲ್ಲಿಯೇ ವಸತಿ ಮಾಡಿಕೊಂಡೂ ಕೂಡ ಸಮ್ಮೇಳನ ಸ್ಥಳಕ್ಕೆ ಮೆಟ್ರೋದಲ್ಲಿ ಬರಬಹುದು. ಯೆಲ್ಲೋ ಲೈನ್, ಬ್ಲೂಲೈನ್ ಎಂದು ಎರಡೂ ಲೈನ್‌ಗಳಿವೆ. ರಾಜೀವ ಚೌಕದಲ್ಲಿ ಲೈನನ್ನು ಬದಲಿಸಬೇಕು. ಉತ್ತಮ ನಗರ ಈಸ್ಟ್ ಸ್ಟೇಷನ್‌ದಲ್ಲಿ ಇಳಿಯ ಬೇಕು. ಅಲ್ಲಿಂದ ದಾಬಡಿ- ಪಾಲಮ್ ಮುಖ್ಯ ರಸ್ತೆಯಲ್ಲಿ ದಾಬಡಿ (Dabri) ತಿರುವಿನಲ್ಲಿರುವ ಎಂ.ಸಿ. ಡಿ. ಬರಾತ್ ಘರ್ (ಕಲ್ಯಾಣ ಮಂಟಪ) - ಸಮುದಾಯ ಭವನದ ಬಳಿ ಸಮ್ಮೇಳನವು ಜರುಗುತ್ತದೆ.

ವಿಶೇಷ ಸೂಚನೆ : ಮೆಟ್ರೋ ರೇಲ್ ಬಹಳ ವೇಗವಾಗಿ ಸಂಚರಿಸುತ್ತವೆ. ಹತ್ತುವಾಗ ಇಳಿಯುವಾಗ ಎಚ್ಚರಿಕೆಯಿಂದ ಇರಬೇಕು. ಗುಂಪಿನಲ್ಲಿರುವ ಎಲ್ಲ ಜನರಿಗೆ ಒಮ್ಮೆಗೇ ಇಳಿಯಲು ಆಗದಿದ್ದರೆ ಗಾಬರಿ ಆಗಬೇಕಿಲ್ಲ. ಟ್ರೇನ್ ಹೋಗಿ ಪುನಃ ಬೇಗನೆ ಆ ನಿಲ್ದಾಣಕ್ಕೆ ಬರುತ್ತವೆ. ಆಗ

ಇಳಿಯಬಹುದು. ಮೊದಲು ಇಳಿದವರು ತಮ್ಮ ಜನರಿಗಾಗಿ ಕಾಯುತ್ತ ಇದ್ದರೆ ಅವರು ಪುನಃ ಬರುವರು. ಕಾರ್ಯಕರ್ತರು, ತರುಣರು ವಯಸ್ಸಾದವರಿಗೆ ಸಹಾಯ ಮಾಡಬೇಕು.

ಸಮ್ಮೇಳನಕ್ಕೆ ಬರುವವರು ಕಲ್ಯಾಣ ಕಿರಣದ ಈ ಪ್ರತಿಯನ್ನು ತರಬೇಕು ಎಂದು ಸೂಚಿಸುತ್ತೇವೆ.

1. ದೆಹಲಿ ನಗರದ ಸಂದರ್ಶನವನ್ನು ದಿ.30-10-2007ರಂದು ಮತ್ತು ದಿ.31-10-2007ರಂದು ಏರ್ಪಡಿಸಲಾಗಿದೆ. ಎರಡೂ ದಿವಸ ಬೇರೆ ಬೇರೆ ಸ್ಥಳಗಳ ಸಂದರ್ಶನ ಇರುತ್ತದೆ. ಊಟ - ತಿಂಡಿ- ವಸತಿ ಸೇರಿ ಒಬ್ಬರಿಗೆ ಒಂದು ದಿವಸಕ್ಕೆ 200ರೂ; ಎರಡು ದಿವಸಕ್ಕೆ 400ರೂ ಕೇವಲ ದೆಹಲಿ ಮಾತ್ರ ನೋಡಿ ವಾಪಸ್ಸು ಹೊರಡುವವರು ದಿ.31-10-2007ರ ರಾತ್ರಿ, ಅಥವಾ 1-11-2007ರ ಬೆಳಗಿನ ಜಾವ ಹೊರಡುವ ಟ್ರೇನ್‌ಗೆ ಅಲ್ಲಿಂದ ಹೊರಡಬಹುದು.

2. ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೇಲಿನ 2 ದಿವಸಗಳ ಮತ್ತು ಕೆಳಕಂಡ ಊರುಗಳ ಪ್ರವಾಸ ಮಾತ್ರ ಏರ್ಪಡಿಸಲಾಗುತ್ತಿದೆ. 30-10-2007ರಂದು ಬೆಳಗ್ಗೆ ಹೊರಡುವುದು. ಪುನಃ 7-11-2007ರಂದು ವಾಪಸ್ಸು ಬಂದು ದೆಹಲಿ ತಲ್ಪುವುದು.
ಒಬ್ಬರಿಗೆ 9000=00 (ಒಂಬತ್ತು ಸಾವಿರ) ರೂ. ಊಟ, ವಸತಿ, ಪ್ರವಾಸ ಸೇರಿ.

ದೆಹಲಿ -ಚಂಡೀಗಢ -ಕಾತ್ರಾ-ಕುಲು- ಮನಾಲಿ- ಶಿಮ್ಲಾ - ಅಮೃತಸರ -ವಾಘಾ ಗಡಿ (ಭಾರತ -ಪಾಕಿಸ್ಥಾನ ಗಡಿ), ಋಷಿಕೇಶ್ -ಹರದ್ವಾರ - ದೆಹಲಿ. ತಂಗುವಿಕೆ - ಚಂಡೀಗಢ, ಶಿಮ್ಲಾ, ಮನಾಲಿ, ಅಮೃತಸರ, ಹರದ್ವಾರ.

ಆಸಕ್ತಿ ಇರುವವರು ದೂರವಾಣಿ ಮೂಲಕ ತಾವು ಬರಲಿರುವ ಬಗ್ಗೆ ತಿಳಿಸಿದರೆ ಸಮ್ಮೇಳನ ಮುಗಿದ ನಂತರ ಪ್ರವಾಸಕ್ಕೆ ಸಿದ್ಧತೆ ಮಾಡಲು ಅನುಕೂಲವಾಗುವುದು.
ದೂರವಾಣಿ : 94481-37508

ವಿಶೇಷ ಸೂಚನೆ

ಕಳೆದೆರಡು ಸಲ ಸಮ್ಮೇಳನ ಮಾಡಿದಾಗ ನಮ್ಮದೇ ಆದ ಸ್ಥಳ ಇರಲಿಲ್ಲ, ಈಗ ಸ್ವತಂತ್ರವಾದ ನಮ್ಮದೇ ಆದ ಕಟ್ಟಡವಿದೆ. ಆದ್ದರಿಂದ ಸ್ಥಳ ಸಂದರ್ಶನಕ್ಕಾಗಿಯೋ ರಿಸರ್ವೇಷನ್ ಸಿಗದೆಯೋ ಯಾವುದೇ ಕಾರಣದಿಂದ ಉಳಿಯಬೇಕಾದವರು ಊಟ -ವಸತಿ ಸೇರಿ ಒಬ್ಬರಿಗೆ ದಿವಸಕ್ಕೆ 100 (ಒಂದು ನೂರು)ರೂ ಪಾವತಿಸಿದರೆ ಅಡಿಗೆಯವರ ವ್ಯವಸ್ಥೆ ಮಾಡಿ ಅವರಿಗೆ ತಂಗಲು ಅವಕಾಶ ಮಾಡಿಕೊಡಲು ನಿರ್ಧರಿಸಲಾಗಿದೆ. ದೆಹಲಿಯಲ್ಲಿ ವಿದ್ಯುತ್, ನೀರು, ಕಟ್ಟಡ ತೆರಿಗೆ ಇವೆಲ್ಲ ಅಧಿಕ. ಅದಕ್ಕಾಗಿ ಸಹೃದಯರು ಸಹಕರಿಬೇಕು ಮತ್ತು ಈ ಅವಕಾಶದ ಸದುಪಯೋಗ ತೆಗೆದುಕೊಳ್ಳಬಹುದು.

ದ್ವಿತೀಯ ಲಿಂಗಾಯತ ಧರ್ಮ ಸಮ್ಮೇಳನ ಸಮಿತಿ
ನವ ದೆಹಲಿ

ಬಸವ ಮಂಟಪ ಸ್ಥಳ ನಿರ್ದೇಶನ :

ನವ ದೆಹಲಿಯಲ್ಲಿರುವ ಬಸವ ಮಂಟಪವು ಮಹಾವೀರ ಎನ್‌ಕ್ಲೇವ್‌ದ ಬೆಂಗಾಲಿ ಕಾಲೋನಿಯಲ್ಲಿದೆ. ಉತ್ತಮ ನಗರ ಈಸ್ಟ್ ಮೆಟ್ರೋ ಸ್ಟೇಷನ್‌ಗೆ ಸಮೀಪವಾಗುತ್ತದೆ. ಅತ್ಯಂತ ಪ್ರಸಿದ್ಧವಾದ ಸಮೀಪದಲ್ಲಿರುವ ಗುರುತೆಂದರೆ ಸುಲಭ್ ಇಂಟರ್ ನ್ಯಾಷನಲ್ ಸಂಸ್ಥೆಯ ಕೇಂದ್ರ ಕಾರ್ಯಾಲಯ. ವಿಮಾನ ನಿಲ್ದಾಣದ ಕಡೆಯಿಂದ ಬರುವವರು ದ್ವಾರಕ ರಸ್ತೆಯಲ್ಲಿ ಬಂದು, ಪಾಲಮ್ ಫ್ಲೈ ಓವರ್- ದ್ವಾರಕ ಕ್ರಾಸ್ ಬಳಿ ಬಲಕ್ಕೆ ಪಾಲಮ್ -ದಾವಡಿ ರೋಡ್‌ಗೆ ಸೇರಬೇಕು. ಸುಲಭ್ ಇಂಟರ್ ನ್ಯಾಷನಲ್‌ಗೆ ಮೊದಲೇ ಸಿಗುವ ರಸ್ತೆಯಲ್ಲಿ ಎಡಕ್ಕೆ ಬೆಂಗಾಲಿ ಕಾಲೋನಿಗಾಗಿ ಹೊರಳಬೇಕು. ನ್ಯೂ ಡೆಲ್ಲಿ ರೇಲ್ವೆ ಸ್ಟೇಷನ್‌ದಿಂದ (ಸುಮಾರು 20 ಕಿ.ಮಿ) ಬರುವವರು ಮಂಗಲಪುರಿ ರಸ್ತೆಯಲ್ಲಿ ಬಂದು ಸುಲಭ್ ಇಂಟರ್ ನ್ಯಾಷನಲ್ ಆದ ಮೇಲೆ ಬಲಕ್ಕೆ ಹೊರಳಬೇಕು.

ವಿಮಾನವು ಬಸವ ಮಂಟಪಕ್ಕೆ ಹತ್ತಿರದಲ್ಲಿದ್ದು ಕೇವಲ 15 ನಿಮಿಷಗಳಲ್ಲಿ ತಲುಪಬಹುದು. ಪಾಲಮ್ ಫ್ಲೈ ಓವರ್‌ದಿಂದ ಬಸವ ಮಂಟಪದವರೆಗೆ ಸೂಚನಾ ಫಲಕ ಹಾಕಿರಲಾಗುವುದು.

ಓಂ ಶ್ರೀ ಗುರುಬಸವಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2008 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ತೊಂದನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ

ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2008ನೆಯ ಇಸವಿಯ ಜನವರಿ ದಿ. 11ರಿಂದ 15ರವರೆಗೆ ನಡೆಯುವ 21 ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮವನ್ನು ಏರ್ಪಡಿಸಲೂ ಬಹುದು. 2008 ನೆಯ ಇಸವಿಯ 21ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ, ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
1.	05-11-2007	ಶಿವ (ಸೋಮ) ವಾರ	ವಿಜಯಪುರ
2.	06-11-2007	ಬಸವ (ಮಂಗಳ) ವಾರ	ಸಾಸಲು
3.	07-11-2007	ಚನ್ನ(ಬುಧ)ವಾರ	ಹುಲ್ಲೇಕೆರೆ
4.	08-11-2007	ಪ್ರಭು (ಗುರು)ವಾರ	ತುರುವೇಕೆರೆ

5.	09-11-2007	ಮಾತೃ (ಶುಕ್ರ) ವಾರ	ಗುಡಿಗೊಂಡನ ಹಳ್ಳಿ
6.	10-11-2007	ಶರಣ (ಶನಿ) ವಾರ	ಎಳನಾಡು
7.	11-11-2007	ದೇವ (ಭಾನು) ವಾರ	ತಮ್ಮಡಿಹಳ್ಳಿ
8.	12-11-2007	ಶಿವ (ಸೋಮ) ವಾರ	ನಾಗರಾಳು
9.	13-11-2007	ಬಸವ (ಮಂಗಳ) ವಾರ	ಚಿಕ್ಕಮಗಳೂರು
10.	14-11-2007	ಚನ್ನ (ಬುಧ) ವಾರ	”
11.	15-11-2007	ಪ್ರಭು (ಗುರು) ವಾರ	”
12.	16-11-2007	ಮಾತೃ (ಶುಕ್ರ) ವಾರ	ಭದ್ರಾವತಿ
13.	17-11-2007	ಶರಣ (ಶನಿ) ವಾರ	”
14.	18-11-2007	ದೇವ (ಭಾನು) ವಾರ	ಶಿವಮೊಗ್ಗ
15.	19-11-2007	ಶಿವ (ಸೋಮ) ವಾರ	”
16.	20-11-2007	ಮಂಗಳ (ಬಸವ) ವಾರ	”
17.	21-11-2007	ಚನ್ನ(ಬುಧ)ವಾರ	ದಾವಣಗೆರೆ
18.	22-11-2007	ಪ್ರಭು(ಗುರು)ವಾರ	ಚಿತ್ರದುರ್ಗ
19.	23-11-2007	ಮಾತೃ(ಶುಕ್ರ)ವಾರ	ಹಿರಿಯೂರು
20.	24-11-2007	ಶರಣ(ಶನಿ)ವಾರ	ದೊಡ್ಡಉಳ್ಳಾರ್ತಿ
21.	25-11-2007	ದೇವ(ಭಾನು)ವಾರ	ಚಳ್ಳಕೆರೆ
22.	26-11-2007	ಶಿವ (ಸೋಮ) ವಾರ	ಚಿತ್ರನಾಯಕನ ಹಳ್ಳಿ
23.	27-11-2007	ಬಸವ (ಮಂಗಳ) ವಾರ	ಬಳ್ಳಾರಿ
24.	28-11-2007	ಚನ್ನ(ಬುಧ)ವಾರ	”
25.	29-11-2007	ಪ್ರಭು (ಗುರು) ವಾರ	ರಾಯಚೂರು
26.	30-11-2007	ಮಾತೃ(ಶುಕ್ರ)ವಾರ	ಶಕ್ತಿ ನಗರ
27.	1-11-2007	ಶರಣ(ಶನಿ)ವಾರ	ಗಂಗಾವತಿ
28.	2-12-2007	ದೇವ (ಭಾನು) ವಾರ	ಕೊಪ್ಪಳ
29.	3-12-2007	ಶಿವ (ಸೋಮ) ವಾರ	”
30.	4-12-2007	ಬಸವ (ಮಂಗಳ) ವಾರ	”
31.	5-12-2007	ಚನ್ನ(ಬುಧ)ವಾರ	ಹಾವೇರಿ

32.	6-12-2007	ಪ್ರಭು (ಗುರು) ವಾರ	ಹುಬ್ಬಳ್ಳಿ
33.	7-12-2007	ಮಾತೃ (ಶುಕ್ರ) ವಾರ	ಧಾರವಾಡ
34.	8-12-2007	ಶರಣ (ಶನಿ) ವಾರ	ಸವದತ್ತಿ
35.	9-12-2007	ದೇವ (ಭಾನು) ವಾರ	ಬೈಲಹೊಂಗಲ
36.	10-12-2007	ಶಿವ (ಸೋಮ) ವಾರ	ನೇಸರಗಿ
37.	11-12-2007	ಬಸವ (ಮಂಗಳ) ವಾರ	ಬೆಳಗಾವಿ
38.	12-12-2007	ಚನ್ನ (ಬುಧ) ವಾರ	ಬೆಳಗಾವಿ
39.	13-12-2007	ಪ್ರಭು (ಗುರು) ವಾರ	,,
40.	14-12-2007	ಮಾತೃ (ಶುಕ್ರ) ವಾರ	,,
41.	15-12-2007	ಶರಣ (ಶನಿ) ವಾರ	ಸಂಕೇಶ್ವರ
42.	16-12-2007	ದೇವ (ರವಿ) ವಾರ	ಗಡಿಹಿಂಗ್ಲಾಜ್
43.	17-12-2007	ಶಿವ (ಸೋಮ) ವಾರ	ಗೋಕಾಕ್
44.	18-12-2007	ಬಸವ (ಮಂಗಳ) ವಾರ	,,
45.	19-12-2007	ಚನ್ನ (ಬುಧ) ವಾರ	,,
46.	20-12-2007	ಪ್ರಭು (ಗುರು) ವಾರ	,,
47.	21-12-2007	ಮಾತೃ (ಶುಕ್ರ) ವಾರ	ಶೇಗುಣಸಿ
48.	22-12-2007	ಶರಣ (ಶನಿ) ವಾರ	ಕನಮಡಿ
49.	23-12-2007	ದೇವ (ರವಿ) ವಾರ	ಬಿಜಾಪುರ
50.	24-12-2007	ಶಿವ (ಸೋಮ) ವಾರ	ಸಿಂದಗಿ
51.	25-12-2007	ಬಸವ (ಮಂಗಳ) ವಾರ	ಭೀಮರಾಯನ ಗುಡಿ
52.	26-12-2007	ಚನ್ನ (ಬುಧ) ವಾರ	ಯಾದಗಿರಿ
53.	27-12-2007	ಪ್ರಭು (ಗುರು) ವಾರ	ಉದಗೀರ್
54.	28-12-2007	ಮಾತೃ (ಶುಕ್ರ) ವಾರ	ಬೀದರ್
55.	29-12-2007	ಶರಣ (ಶನಿ) ವಾರ	,,
56.	30-12-2007	ದೇವ (ರವಿ) ವಾರ	,,
57.	31-12-2007	ಶಿವ (ಸೋಮ) ವಾರ	,,
58.	1-01-2008	ಬಸವ (ಮಂಗಳ) ವಾರ	ಜಹಿರಾಬಾದ್

59.	2-01-2008	ಚನ್ನ (ಬುಧ) ವಾರ	ಹೈದ್ರಾಬಾದ್
60.	3-01-2008	ಪ್ರಭು (ಗುರು) ವಾರ	,,
61.	4-01-2008	ಮಾತೃ (ಶುಕ್ರ) ವಾರ	,,
62.	5-01-2008	ಶರಣ (ಶನಿ) ವಾರ	,,
63.	6-01-2008	ದೇವ (ರವಿ) ವಾರ	,,
64.	7-01-2008	ಶಿವ (ಸೋಮ) ವಾರ	,,
65.	8-01-2008	ಬಸವ (ಮಂಗಳ) ವಾರ	,,
66.	9-01-2008	ಚನ್ನ (ಬುಧ) ವಾರ	,,
67.	10-01-2008	ಪ್ರಭು (ಗುರು) ವಾರ	ಕೂಡಲ ಸಂಗಮಕ್ಕೆ ಪ್ರಯಾಣ

ವಚನ ದುಂದುಭಿ -8

-ಸಚ್ಚಿದಾನಂದ

1. "ನೀವು ಮಾಡಿದ ಪೂಜೆ ಹುಸಿ; ನನಗೆ ಬಸವಣ್ಣ ಮಾಡಿದ ಪೂಜೆಯೆ ದಿಟ ದಿಟ" ಇವು ಯಾರ ನುಡಿಗಳು ?
2. ಗುರು ಬಸವಣ್ಣನವರು ಕೂಡಲ ಸಂಗಮದಿಂದ ಮೊದಲು ಎಲ್ಲಿಗೆ ಹೋದರು ?
3. ಗುರು ಬಸವಣ್ಣನವರು ಅಪಾರವಾದ ಸಂಪತ್ತನ್ನು ಹೇಗೆ ತೆಗೆಸಿ ಕೊಟ್ಟರು ?
4. ಮಣ್ಣ ಮರೆಯ ದೇಗುಲದಲ್ಲಿ ಇಷ್ಟಲಿಂಗ ಯೋಗದಲ್ಲಿ ನಿರತನಾಗಿದ್ದ ವ್ಯಕ್ತಿ ಯಾರು ?
5. ಅನಿಮಿಷ ಯೋಗಿಯ ದೀಕ್ಷಾ ಗುರು ಯಾರು ?
6. ಅಲ್ಲಮ ಪ್ರಭುದೇವರು ಶೂನ್ಯ ಪೀಠಾರೋಹಣ ಮಾಡಿರುವುದನ್ನು ಜನಪದರು ಹೇಗೆ ಬಣ್ಣಿಸಿದ್ದಾರೆ ?
7. ಮೋಳಿಗೆ ಮಾರಯ್ಯ ಮತ್ತು ಅವರ ಧರ್ಮ ಪತ್ನಿಯವರಲ್ಲದೆ ಕಾಶ್ಮೀರದಿಂದ ಬಂದ ಇನ್ನೊಬ್ಬ ಶರಣೆ ಯಾರು ?
8. ನೃತ್ಯ ಮತ್ತು ನಾಟಕ ಮಾಡಿ ತೋರಿಸುತ್ತ ಧರ್ಮ ಬೋಧೆ ಮಾಡುತ್ತಿದ್ದ ಶರಣ ಯಾರು?
9. ಮಾಡಿ ನೀಡಿ ಹೋದಹೆನೆಂಬಾಗ ಕೈಲಾಸವೇನು ಕೈ ಕೂಲಿಯೆ? ಎಂದು ಯಾರು ಯಾರಿಗೆ ಕೇಳಿದರು.?
10. ಲಿಂಗಾಯತ ಧರ್ಮೀಯರ ಷಟ್ ಸಂಜ್ಞೆಗಳು ಯಾವುವು ?
11. ಷಡಾಚಾರಗಳು ಯಾವುವು ?
12. ಬಸವಾಚಾರ ಎಂದರೇನು ?
13. ಇಷ್ಟಲಿಂಗ ದೀಕ್ಷೆ ಪಡೆದ ನಂತರ ಲಿಂಗವನ್ನು ಮೈಮೇಲಿನಿಂದ ಅಗಲಿಸಿದರೆ ಏನಾಗುತ್ತದೆ?
14. ಸಂಪ್ರದಾಯವಾದಿಗಳ ಪ್ರಕಾರ ವರ್ಣಾಂತರ ವಿವಾಹ ಮಾಡಿದುದಕ್ಕಾಗಿ ಶರಣರಿಗೆ ಯಾವ ಶಿಕ್ಷೆಯನ್ನು ಕೊಟ್ಟರು ?
15. ಶಂಕರ ದಾಸಿಮಯ್ಯ ಇವರ ಅಂಕಿತನಾಮವೇನು ?

ವಚನ ದುಂದುಭಿ-7ರ ಸರಿ ಉತ್ತರಗಳು

1. ಶರಣ ಹರ್ಡೇಕರ್ ಮಂಜಪ್ಪನವರು
2. ವಿಶ್ವ ಕಲ್ಯಾಣ ಮಿಷನ್
3. ಹಿತ ಚಿಂತಕ ಮುದ್ರಣಾಲಯ
4. ಆಯ್ದಕ್ಕಿ ಮಾರಯ್ಯ, ಮೋಳಿಗೆ ಮಾರಯ್ಯನವರು
5. ಡಾ|| ಫ.ಗು.ಹಳಕಟ್ಟಿಯವರು
6. ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಮನಗೂಳಿಯಲ್ಲಿ
7. ಹಾಲು ಮಾರುವ ಗೌರಮ್ಮ
8. ಪರಮಾತ್ಮನು ಬಸವಣ್ಣನವರಿಗೆ ಹೇಳಿರುವುದು
9. ನಿಷ್ಠೆ
10. ಮೃಡ ಶರಣರ ನುಡಿಗಡಣವೇ ಕಡಗೀಲು
11. ಸೃಷ್ಟಿ, ಸ್ಥಿತಿ, ಲಯ, ತಿರೋದಾನ, ಅನುಗ್ರಹ
12. ಸಿಖ್ ಧರ್ಮ
13. ಧರ್ಮಗುರು ನಿಷ್ಠೆ, ಲಿಂಗದೇವ ನಿಷ್ಠೆ, ಧರ್ಮ ಶಾಸ್ತ್ರ ನಿಷ್ಠೆ, ಕಾಯಕ -ದಾಸೋಹ ನಿಷ್ಠೆ, ಗಣ ಮೇಳಾಪ ನಿಷ್ಠೆ, ಶರಣ ಮೇಳ ನಿಷ್ಠೆ
14. ಬಸವ ಜಯಂತಿಯಂದು
15. ಚನ್ನಬಸವಣ್ಣನವರ ವಚನ
16. ಅಲ್ಲಮ ಪ್ರಭುದೇವರ ವಚನ
17. ಅಕ್ಕಮಹಾದೇವಿಯವರ ವಚನ
18. ಕಿನ್ನರಿ ಬ್ರಹ್ಮಯ್ಯನವರು ಅಕ್ಕಮಹಾದೇವಿ ತಾಯಿಯವರಿಗೆ ಹೇಳಿದರು.
19. ಕಿನ್ನರಿ ಬ್ರಹ್ಮಯ್ಯನವರ ವಚನಾಂಕಿತ
20. ಗೋಪತಿನಾಥ ವಿಶ್ವೇಶ್ವರ

ವಚನ ದುಂದುಭಿ- 7ರ ಸರಿಯುತ್ತರ ನೀಡಿದವರು


1. ನಿರ್ಮಲಾ ಜಯದೇವ, ಬೆಂಗಳೂರು
2. ಎಚ್.ಶಾಂತಮ್ಮ, ಭದ್ರಾವತಿ
3. ಸುಮಾ ರಾಜು, ಭದ್ರಾವತಿ,
4. ರೂಪಾ ಜಗದೀಶ್, ಭದ್ರಾವತಿ
5. ಸರ್ವಮಂಗಳಾ ಗಂಗಾಧರ, ಬೆಂಗಳೂರು
6. ಸಂಧ್ಯಾ ಗಣೇಶ್, ಬೆಂಗಳೂರು
7. ಮಲ್ಲನಗೌಡ ಪೋಲೀಸ್ ಪಾಟೀಲ್, ರಾಯಚೂರು
8. ಎಚ್.ಶಾಂತಮ್ಮ, ಭದ್ರಾವತಿ
9. ಎಚ್.ಚಂದ್ರಿಕಾ, ಭದ್ರಾವತಿ
10. ಮಮತಾ ಪ್ರವೀಣ್, ಭದ್ರಾವತಿ
11. ವಿಜಯಾ ರಾಜು, ಭದ್ರಾವತಿ
12. ಅನಿತಾ ಶಂಕರ್, ಭದ್ರಾವತಿ
13. ದಾನೇಶ್ವರಿ, ಬಿಜಾಪುರ


ಕಲ್ಯಾಣ ಕಿರಣದ ಓದುಗರಿಗೆ ಸೂಚನೆ

ಕಲ್ಯಾಣ ಕಿರಣದ ಪ್ರತಿಗಳು ಒಂದಕ್ಕಿಂತ ಹೆಚ್ಚು ಬರುತ್ತಿವೆ ಎಂದು ಕೆಲವರು ಭೇಟಿಯಾದಾಗ ತಿಳಿಸುತ್ತಾರೆ. ಅವರ ಕ್ರಮ ಸಂಖ್ಯೆ ಹೇಳದಿದ್ದರೆ ಪ್ರತಿಯನ್ನು ಕಡಿತ ಮಾಡಲು ಆಗುವುದಿಲ್ಲ. ಮೊದಲ ಪ್ರತಿ ಇಟ್ಟುಕೊಂಡು ಎರಡನೆ ಪ್ರತಿ ಬಂದಾಗ (*Refused*), ನಿರಾಕರಿಸಲಾಗಿದೆ ಎಂದು ಬರೆದು ವಾಪಸು ಪೋಸ್ಟ್ ಡಬ್ಬಿಗೆ ಹಾಕಿರಿ. ಅಥವಾ ವಿಲೇವಾರಿ ಮಾಡಲು ಬಂದ ಅಂಚೆಪೇದೆಗೇ ಕೊಟ್ಟುಬಿಡಿರಿ. ಅದು ವಾಪಸ್ಸು ನಮಗೆ ಬಂದಾಗ ನಂಬರ್ ನೋಡಿ ಕಡಿತ ಮಾಡಲಾಗುವುದು.

- ವ್ಯವಸ್ಥಾಪಕರು

ವಚನ ಸಾಹಿತ್ಯ ರಕ್ಷಿಸಲು ಕಲ್ಯಾಣವನ್ನು ಬಿಟ್ಟು
ಹೊರಡುತ್ತಿರುವ ಶರಣ ಸಮೂಹ.





CPMG/KA/BGW-50/2006-2008 WPP(W)-17 R.No.19980/70
ಶರಣರುಗಳಾದ ಹರಳಯ್ಯ ,ಮಧುವರಸ,ಶೀಲವಂತರಿಗೆ ಎಳೆಹೂಟೆ ಶಿಕ್ಷೆ